# ಎನ್‌ಐಟಿಕೆಯಲ್ಲಿ ವಿಶಿಷ್ಟ ಉಂಗುರ ಪ್ರಸ್ತುತಿ ಸಮಾರಂಭ

**ಸಂ.ಕ. ಸಮಾಚಾರ, ಮಂಗಳೂರು**

ಉಂಗುರ ಪ್ರಸ್ತುತಿ ಸಮಾರಂಭವು ಎನ್‌ಐಟಿಕೆ ಸುರತ್ಕಲ್‌ನ ವಿಶಿಷ್ಟ ಸಂಪ್ರದಾಯಗಳಲ್ಲಿ ಒಂದಾಗಿದೆ. ಪ್ರತಿ ಪದವೀಧರ ವಿದ್ಯಾರ್ಥಿಗೆ ಬೆಳ್ಳಿಯ ಉಂಗುರವನ್ನು ನೀಡಲಾಗುತ್ತದೆ, ಅದರ ಮೇಲೆ ಎನ್‌ಐಟಿಕೆ ಲಾಂಛನ ಮತ್ತು ಪದವಿಯ ವರ್ಷವನ್ನು ಕೆತ್ತಲಾಗಿರುತ್ತದೆ. ಅಧ್ಯಾಪಕರು ವಿದ್ಯಾರ್ಥಿಗಳನ್ನು ತಮ್ಮ ಅತಿಥಿಗಳಂತೆ ಪರಿಗಣಿಸಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಪ್ರತ್ಯೇಕವಾಗಿ ಉಂಗುರವನ್ನು ನೀಡಿ ಅವರ ಮುಂದಿನ ಜೀವನಕ್ಕೆ ಶುಭಹಾರೈಸುವ ಸಮಾರಂಭ ವಿಶಿಷ್ಟವಾಗಿದೆ.

ಮೊದಲ ಉಂಗುರ ಪ್ರಸ್ತುತಿ ಸಮಾರಂಭವನ್ನು ಅಂದಿನ ಕೆಆರ್‌ಇಸಿಯ (ಕರ್ನಾಟಕ ಪ್ರಾದೇಶಿಕ ಎಂಜಿನಿಯರಿಂಗ್ ಕಾಲೇಜು) ಪ್ರಾಂಶುಪಾಲ ಪ್ರೊ.ಎ.ಎಸ್. ಅಡ್ಕೆ ಪ್ರಾರಂಭಿಸಿದರು ಮತ್ತು ಅಂದಿನಿಂದ ಈ ಸಂಪ್ರದಾಯವು ಸುಮಾರು 50 ವರ್ಷಗಳಿಂದ ಮುಂದುವರೆದಿದೆ. ಒಟ್ಟು 2639 ವಿದ್ಯಾರ್ಥಿಗಳಿಗೆ ಬೆಳ್ಳಿ ಉಂಗುರಗಳನ್ನು ನೀಡಲಾಯಿತು. ಸಮಾರಂಭದಲ್ಲಿ, ಹಲವಾರು ವಿಭಾಗಗಳಲ್ಲಿ ವರ್ಷದ ಅತ್ಯುತ್ತಮ ಹೊರಹೋಗುವ ವಿದ್ಯಾರ್ಥಿಗಳು ಚಿನ್ನ, ಬೆಳ್ಳಿ ಪದಕಗಳು, ವಿದ್ಯಾರ್ಥಿ ಬಹುಮಾನ ನಿಧಿಗಳು ಮತ್ತು ಪ್ರಮಾಣಪತ್ರಗಳನ್ನು ಪಡೆದರು. ಬೆಂಗಳೂರಿನ ಸೋನಾ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಕಮ್ಮಾಜೆ ಯಜ್ಞನಾರಾಯಣ ಮುಖ್ಯ ಅತಿಥಿಯಾಗಿದ್ದರು. ಯೂತ್ ಫಾರ್ ಸೇವಾದ ಸ್ಥಾಪಕ ಮತ್ತು ಮುಖ್ಯ ಮಾರ್ಗದರ್ಶಕ ವೆಂಕಟೇಶ ಮೂರ್ತಿ ಅತಿಥಿಯಾಗಿದ್ದರು. ಎನ್‌ಐಟಿಕೆ ನಿರ್ದೇಶಕ (ಹೆಚ್ಚುವರಿ ಉಸ್ತುವಾರಿ) ಪ್ರೊ.ಪ್ರಸಾದ್ ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ರಿಜಿಸ್ಟ್ರಾ ರವೀಂದ್ರನಾಥ್ ಕೆ., ಡೀನ್ ಶ್ರೀಕಾಂತ ಎಸ್.ರಾವ್ ಮೊದಲಾದವರಿದ್ದರು.



Samyutha Karnataka, Date:28/04/23 p, no-02